**ಸಿ.ಸಿ. ನಂಬರ್ : 266/2019**
**ಡಿ.ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 19.07.2025

**ಪಾಟೀ ಸವಾಲು : ಶ್ರೀ ಹೆಚ್.ಈ.ಪಿ ವಕೀಲರಿಂದ –ಫಿರ್ಯಾದಿಯ ಪರವಾಗಿ**

ನನಗೆ ಉಮೇಶ್ ಎನ್ನುವವರು ಸುಮಾರು 15 ವರ್ಷಗಳಿಂದ ಪರಿಚಯ. ಉಮೇಶ್ ಅವರ ಸೋದರ ಮಾವ ಶಿವಪ್ಪ ಅವರು ನನಗೆ 15 ವರ್ಷಗಳಿಂದ ಪರಿಚಯ. ಸದರಿ ಶಿವಪ್ಪ ನವರಿಂದ ನಾನು 25 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ. ಸದರಿ ಹಣಕ್ಕೆ ಭದ್ರತೆಯಾಗಿ ಬರೆದುಕೊಟ್ಟಂತಹ ನೊಂದಾಯಿತ ಕ್ರಯ ಕರಾರು ಪತ್ರವನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ ಕ್ರಯ ಕರಾರು ಪತ್ರವನ್ನು ರದ್ದುಪಡಿಸಿದ ರದ್ದತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರ ಅಂದರೆ ಇಲ್ಲ, ಅವಶ್ಯಕತೆ ಇದ್ದರೆ ಮಾಡುತ್ತೇನೆ. ಸದರಿ ರದ್ದತಿ ಪತ್ರದಲ್ಲಿ ನಾನು ಶಿವಪ್ಪನವರಿಂದ ಪಡೆದ 25 ಲಕ್ಷ ಹಣವನ್ನು ಮರುಪಾವತಿ ಮಾಡಿದ ಬಗ್ಗೆ ಉಲ್ಲೇಖ ಇದೆ. ನಾನು ಈ ನ್ಯಾಯಾಲಯದಲ್ಲಿ ನಿಡಿ-1 ರಿಂದ ನಿಡಿ-20 ನ್ನು ಏಕೆ ಹಾಜರುಪಡಿಸಿರುತ್ತೀನಿ ಎಂದರೆ ನಾನು ಹಣ ಭದ್ರತೆ ಪತ್ರವನ್ನು ನೊಂದಾವಣಿ ಮಾಡಿ ಕೊಡುವಾಗ ಅದಕ್ಕೆ ಪೂರಕವಾಗಿ 20 ಚೆಕ್ಕುಗಳನ್ನು ಶಿವಪ್ಪ ಪಡೆದುಕೊಂಡಿದ್ದರಿಂದ ಹಾಜರುಪಡಿಸಿರುತ್ತ್ತೇನೆ, ಮುಂದುವರೆದು ಪಿರ್ಯಾದಿಯು ಸದರಿ ಶಿವಪ್ಪನವರ ಅಕ್ಕನ ಮಗ ಎನ್ನುತ್ತಾರೆ. 2013 ರಲ್ಲಿ ನಾನು ಕ್ರಯ ಕರಾರು ಪತ್ರವೆಂದು ಶಿವಪ್ಪನವರಿಗೆ ಬರೆದುಕೊಟ್ಟಿರುತ್ತೇನೆ. ಸದರಿ ಪತ್ರದಲ್ಲಿ 25 ಲಕ್ಷ ಹಣವನ್ನು ಮುಂಗಡ ಹಣವನ್ನಾಗಿ ತೋರಿಸಿರುತ್ತಾರೆ, ಸಾಲದ ಹಣ ಅಲ್ಲವೆಂದು ಹೇಳುತ್ತಾರೆ. ಸದರಿ 20 ಚೆಕ್ಕುಗಳನ್ನು ಗ್ಯಾರಂಟಿಗೋಸ್ಕರ ಕೊಟ್ಟಿರುತ್ತೇನೆಂದು ಸದರಿ ಒಪ್ಪಂದ ಪತ್ರದಲ್ಲಿ ಹೇಳಿಲ್ಲ.

ನಾನು ಡಿಪ್ಲೋಮೋ ಪದವೀಧರ. ನಾನು ಯಾವುದೇ ಕಾಂಟ್ರ್ಯಾಕ್ಟ್ ಮಾಡುವುದಿಲ್ಲ. ಎಲೆಕ್ಟ್ರಿಕ್ ಯಂತ್ರಗಳನ್ನು ಇಟ್ಟುಕೊಂಡಿರುತ್ತೇನೆ. ನಾನು ಸ್ಟ್ಯಾಂಡರ್ಡ್ ಇಂಜಿನಿಯರಿಂಗ್ ಸರ್ವಿಸ್ ಅಂಡ್ ಅರ್ಥ್ ಮೂವರ್ಸ್ ಎಂಬ ಫರ್ಮ್ ನ ಮಾಲೀಕನಾಗಿರುತ್ತೇನೆ. ಸದರಿ ಸಂಸ್ಥೆಯು ಹಾಸನದ ಹೇಮಾವತಿ ನಗರದ ಸಂತ ಶಿಶುನಾಳ ಶರೀಫ ರಸ್ತೆಯಲ್ಲಿ ಬರುತ್ತದೆ. ನನ್ನ ವಾಸದ ಸ್ಥಳ ಮತ್ತು ವ್ಯವಹಾರಿಕ ಸ್ಥಳ ನಾನು ಈ ಮೇಲೆ ಹೇಳಿದ ವಿಳಾಸದಲೇ ಇದೆ. 2022 ನೇ ಸಾಲಿನಲ್ಲಿ ನಾನು ಈ ಮೇಲೆ ಹೇಳಿದ ವಿಳಾಸದಿಂದ ಸಕಲೇಶಪುರದ ಬಾಳುಪೇಟೆಗೆ ನನ್ನ ವಾಸ ಮತ್ತು ವ್ಯವಹಾರಿಕ ಸ್ಥಳವನ್ನು ಬದಲಾವಣೆ ಮಾಡಿಕೊಂಡಿರುತ್ತೇನೆ. ಹಾಸನದ ಹೇಮಾವತಿ ನಗರದ ಸಂತ ಶಿಶುನಾಳ ಶರೀಫ ರಸ್ತೆಯಲ್ಲಿ ಈಗಲೂ ನನ್ನ ವ್ಯವಹಾರಿಕ ಕೇಂದ್ರ ಇದೆ. ನಾನು ವ್ಯವಹಾರದ ನಿಮಿತ್ತ ಬೇರೆ ಕಡೆ ಹೋದಾಗ ಸದರಿ ವಿಳಾಸದಲ್ಲಿ ನನ್ನ ಹೆಂಡತಿ ಮತ್ತು ನನ್ನ ಮಗ ವಾಸವಿರುತ್ತಾರೆ. ಹಾಸನದ ಹೇಮಾವತಿ ನಗರದಲ್ಲಿರುವ ಮನೆಯು ನನ್ನ ಸ್ವಂತ ಮನೆಯಾಗಿದ್ದು ಅದು ನನ್ನ ಖಾಯಂ ವಿಳಾಸವಾಗಿರುತ್ತದೆ. ನಾನು 2022 ರವರೆಗೂ ಸದರಿ ವಿಳಾಸದಲ್ಲೇ ವಾಸವಾಗಿದ್ದೆನು. ನಾನು ಇಲ್ಲದ ಸಮಯದಲ್ಲಿ ನನಗೆ ಬಂದ ಯಾವುದಾದರೂ ಪತ್ರಗಳನ್ನು ನನ್ನ ಹೆಂಡತಿ ಪಡೆದುಕೊಳ್ಳುತ್ತಾಳೆ ಎಂದರೆ ಸರಿ. 9916918963 ನನ್ನ ಹಳೆಯ ಮೊಬೈಲ್ ನಂಬರ್ ಸಂಖ್ಯೆ ಆಗಿರುತ್ತದೆ. ಸದರಿ ಮೊಬೈಲ್ ಸಂಖ್ಯೆ 2018 ರವರೆಗೆ ಇದ್ದು, ಈಗ ಇಲ್ಲ ಎನ್ನುತ್ತಾರೆ. ಅದು ನಿಖರವಾಗಿ ಯಾವಾಗ ಬದಲಾವಣೆಯಾಯಿತು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಪತ್ರಗಳು ಬಂದಾಗ ನಾನು ಅಲ್ಲಿ ಇಲ್ಲದಿದಾಗ ಪೋಸ್ಟ್ ಮ್ಯಾನ್ ನನಗೆ ಕರೆ ಮಾಡಿ ಹೇಳುತ್ತಾರೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಯಾವುದೇ ಮಾಹಿತಿ ಸಿಕ್ಕಿಲ್ಲ ಎನ್ನುತ್ತಾರೆ.

ನನಗೆ ಸುಮಾರು 20 ವರ್ಷದಿಂದ ಬ್ಯಾಂಕಿನ ವ್ಯವಹಾರ ಮತ್ತು ಹಣದ ವ್ಯವಹಾರದ ಬಗ್ಗೆ

ಗೊತ್ತಿದೆ ಎನ್ನುತ್ತಾರೆ.

ನಾನು ಶಿವಪ್ಪನವರಿಗೆ ಕೊಟ್ಟ 20 ಚೆಕ್ಕುಗಳಿಗೆ ಸಹಿ ಮಾಡಿ ಕೊಟ್ಟಿದ್ದೆ. ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಕೊಡುವುದರಿಂದ ಆಗುವ ಪರಿಣಾಮದ ಬಗ್ಗೆ ನನಗೆ ಮಾಹಿತಿ ಇದೆ. ನಾನು ಶಿವಪ್ಪನವರಿಗೆ ಕೊಟ್ಟಿದ್ದಂತಹ 20 ಚೆಕ್ಕುಗಳ ಪೈಕಿ 10 ಎಸ್ ಬಿ ಐ ಖಾಶೆಗೆ ಮತ್ತು 10 ಚೆಕ್ಕುಗಳು ಕರ್ನಾಟಕ ಬ್ಯಾಂಕಿಗೆ ಸಂಬಂಧಪಟ್ಟದಾಗಿದೆ. ನಾನು ಶಿವಪ್ಪನವರಿಗೆ ಕೊಟ್ಟಿದ್ದ 20 ಚೆಕ್ಕುಗಳ ಸಂಖ್ಯೆಯನ್ನು ನಾನು ಬರೆದುಕೊಂಡಿರುತ್ತೇನೆ. ದಿನಾಂಕ 30.01.2015 ರಲ್ಲಿ ನಾನು 25 ಲಕ್ಷ ಹಣವನ್ನು ಶಿವಪ್ಪನವರಿಗೆ ಮರು ಪಾವತಿ ಮಾಡಿ ಒಪ್ಪಂದ ಪತ್ರವನ್ನು ರದ್ದುಪಡಿಸಿರುತ್ತ್ೇನೆ. ಈ ಪ್ರಕರಣದಲ್ಲಿ ಹಾಜರುಪಡಿಸಿದ ಚೆಕ್ಕಿನ ಸಂಖ್ಯೆ ನನಗೆ ಗೊತ್ತಿಲ್ಲ. ಆದರೆ ಅದು ಎಸ್ ಬಿ ಐ ಬ್ಯಾಂಕಿಗೆ ಸಂಬಂಧಪಟ್ಟಿದ್ದು ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚೆಕ್ಕು ಅಮಾನ್ಯ ಗೊಂಡ ಬಗ್ಗೆ ಮೊಬೈಲ್ ಗೆ ಮಾಹಿತಿ ಬಂದಿರುತ್ತದೆ. ಆ ನಂತರ ನಾನು ಬ್ಯಾಂಕಿಗೆ ಹೋಗಿ ಅಮಾನ್ಯಗೊಂಡ ಚೆಕ್ಕಿನ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ಚೆಕ್ಕು ಅಮಾನ್ಯಗೊಂಡ ವಿಚಾರವನ್ನು ನಾನು ನನ್ನ ಹಾಸನದ ವಕೀಲರಿಗೆ ತಿಳಿಸಿರುವುದಿಲ್ಲ. ದಿನಾಂಕ 30.01.2015 ಕ್ಕೆ ನಾನು ಹಣವನ್ನು ಹಿಂತಿರುಗಿಸಿದ ನಂತರ ಶಿವಪ್ಪನವರಿಗೆ ನನ್ನ 20 ಚೆಕ್ಕುಗಳನ್ನು ವಾಪಸ್ಸು ಕೊಡಿ ಎಂದು ಕೇಳಿದ್ದು, ಅವರು ಹೆಚ್ಚುವರಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದು, ವಾಪಸ್ಸು ಕೊಟ್ಟಿಲ್ಲವೆಂದು ಹೇಳುತ್ತಾರೆ. ಆ ನಂತರ ಶಿವಪ್ಪನವರಿಗೆ ಯಾವುದಾದರೂ ಕಾನೂನು ಕ್ರಮ ಕೈಗೊಂಡಿರುತ್ತೀರ ಎಂದರೆ ಇಲ್ಲವೆಂದು ಹೇಳುತ್ತಾರೆ. ಸದರಿ 20 ಚೆಕ್ಕುಗಳ ಮೇಲೆ ಹಣ ಸಂದಾಯಹ ಮಾಡದಂತೆ ಬ್ಯಾಂಕಿಗೆ ತಿಳಿಸಿರುತ್ತೀರ ಎಂದರೆ ಇಲ್ಲವೆಂದು ಹೇಳುತ್ತಾರೆ. ನಾನು ಈ ಚೆಕ್ಕನ್ನು ಶಿವಪ್ಪನವರಿಗೆ ಕೊಟ್ಟದ್ದೇನೋ ಇಲ್ಲವೋ ಎಂದು ಈಗ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ಕನು ದುರ್ಬಳಕ್ಕೆ ಮಾಡಿಕೊಂಡ ವ್ಯಕ್ತಿಯ ಮೇಲೆ ಯಾವುದೇ

ಕಾನೂನು ಕ್ರಮ ಕೈಗೊಂಡಿರುತ್ತೀರಾ ಎಂದರೆ ಇಲ್ಲವೆಂದು ಹೇಳುತ್ತಾರೆ. ನಿಡಿ-3 ಕ್ಕೆ ಮಾಹಿತಿಯನ್ನು ನಾನೇ ವಕೀಲರಿಗೆ ಕೊಟ್ಟಿರುತ್ತೇನೆ. ನಾನು ಉಮೇಶ್ ರವರೊಂದಿಗೆ ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲ. ಉಮೇಶ್ ಎಂಬುವವರು ಕಳಿಂಗ ಫೈನಾನ್ಸ್ ನಡೆಸುತ್ತಿದ್ದ ಬಗ್ಗೆ ನನಗೆ ಮಾಹತಿ ಇದೆ. ಉಮೇಶ್ ಎಂಬುವವರ ಹೆಸರಿನಲ್ಲಿ ಯಾವುದೇ ಫೈನಾನ್ಸ್ ನಡೆಯುತ್ತಿಲ್ಲ ಎಂದರೆ ಸರಿಯಲ್ಲ.

ದಿನಾಂಕ 30.01.2015 ರಲ್ಲಿ ಉಮೇಶ್ ಎಂಬುವವರು ನನಗೆ ಗೊತ್ತಿಲ್ಲದಂತೆ ನೊಂದಾಯಿತ ಕ್ರಯ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಸದರಿ ಪತ್ರಕ್ಕೆ ನಾನು ಮತ್ತು ನನ್ನ ಹೆಂಡತಿ ಸಹಿ ಮಾಡಿದ್ದು ಸಾಕ್ಷಿದಾರರಾಗಿ ಶಿವಪ್ಪನವರು ಸಹಿ ಮಾಡಿರುತ್ತಾರೆ. ಸದರಿ ಪತ್ರದಲ್ಲಿ ನನ್ನ ವಾಸದ ಮನೆಯ ಮಾರಾಟದ ಬಗ್ಗೆ ಕರಾರನ್ನು ಮಾಡಿಕೊಂಡ ಬಗ್ಗೆ ನಮೂದಾಗಿರುತ್ತದೆ. ಸದರಿ ಪತ್ರದಲ್ಲಿ ಸದರಿ ಮನೆಯ ಮಾರಾಟದ ಮೌಲ್ಯ ರೂ. 47,00,000/- ಎಂದು, ರೂ.46,00,000/- ಗಳನ್ನು ಮುಂಗಡವಾಗಿ ಪಡೆದುಕೊಂಡ ಬಗ್ಗೆ ತೋರಿಸಿರುತ್ತಾರೆ. ಯಾವುದೇ ಪತ್ರಕ್ಕೆ ಸಹಿ ಹಾಕುವಾಗ ಓದಿ, ತಿಳಿದ್ದು ಸಹಿ ಹಾಕಬೇಕು ಎಂಬ ಸಾಮಾನ್ಯ ತಿಳುವಳಿಕೆ ನನಗೆ ಇದೆ. ನಿಡಿ-2 ರಲ್ಲಿ ಧರಣೇಂದ್ರ ಕುಮಾರಸ್ವಾಮಿ ಎಂಬುವವರು ಇನ್ನೊಬ್ಬ ವಾದಿಯಾಗಿರುತ್ತಾರೆ ಎಂದರೆ ಅವರು ಸಾಕ್ಷಿಯಾಗಿ ರುಜು ಮಾಡಲು ಬಂದಿದ್ದರು ಎನ್ನುತ್ತಾರೆ. ನಿಡಿ-2 ರ ವಾದಿಗಳ ಮೇಲೆ ನನಗೆ ವಂಚಿಸಿದ್ದಾರೆಂದು ಯಾವುದಾದರೂ ಕಾನೂನು ಕ್ರಮ ಕೈಗೊಂಡಿದ್ದೀರಾ ಎಂದರೆ ಇಲ್ಲವೆಂದು ಹೇಳುತ್ತಾರೆ. ನಿಡಿ-3 ರ ಖಂಡಿಕೆ -14 ರಲ್ಲಿ ಹೇಳಿರುವಂತೆ ನಾನು 2013 ರಲ್ಲಿ ಉಮೇಶ್ ಎಂಬುವವರಿಂದ 9 ಲಕ್ಷ ಹಣವನ್ನು ಪಡೆದುಕೊಂಡಿರುತ್ತೇನೆಂದು ಹೇಳಿರುತ್ತೇನೇ ಎಂದರೆ ಸರಿಯಲ್ಲ. ನಾನು ಉಮೇಶ್ ಎಂಬುವವರಿಗೆ ಯಾವುದೇ ಖಾಲಿ ಚೆಕ್ಕುಗಳನ್ನು ಕೊಟ್ಟಿರುವುದಿಲ್ಲ. ನಾನು ಉಮೇಶ್ ಎಂಬುವವರಿಂದ ಸಾಲವನ್ನು ಪಡೆದು ಖಾಲಿ ಚೆಕ್ಕುಗಳನ್ನು ಭದ್ರತೆಗಾಗಿ

ಕೊಟ್ಟಿದೆ ಎಂದು ನಿಡಿ-3 ರಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ

ನೀಡಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೋಮವಾರಪೇಟೆ.**